# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2281 |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 26.03.2026. |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಪಾಲಿಕೆ ಕುಮಾರಸ್ವಾಮಿ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಪ್ರಗತಿಪುರ 3ನೇ ಅಡ್ಡ ರಸ್ತೆಯಲ್ಲಿ 2025ರ ರಂಜಾನ್ ಹಬ್ಬದ ದಿನಗಳಲ್ಲಿ ಅನ್ಯಧರ್ಮದ ಕಿಡಿಗೇಡಿ ಗುಂಪಿನಿಂದ ಹಿಂದು ಕುಟುಂಬಕ್ಕೆ ಕೇವಲ ಕ್ಷುಲ್ಲಕ ವಿಚಾರಕ್ಕೆ ಇಡಿ ಕುಟುಂಬದ ಮಹಿಳೆ.ಮಕ್ಕಳು ಸಹಿತ ಬೀದಿಯಲ್ಲಿ ಅಟ್ಟಾಡಿಸಿಕೊಂಡು ಸುಮಾರು 20 ಜನರ ಗುಂಪು ದೌರ್ಜನ್ಯ ಎಸಗಿದ್ದು, ನಂತರ ಅದು ಪ್ರಕ್ಷುದ್ಧ ವಾತಾವರಣವಾಗಿದ್ದರಿಂದ ಸುಮಾರು ಒಂದು ತಿಂಗಳುಗಳ ಕಾಲ ಪೋಲೀಸ್ ಬಿಗಿಭದ್ರತೆ ಒದಗಿಸಲಾಗಿತ್ತು ಇದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಅವರ ಮೇಲೆ ಪ್ರಕರಣ ದಾಖಲಾಗಿದೆಯೇ: ಅದು ಯಾವ ಹಂತದಲ್ಲಿದೆ: ಆ ಪ್ರಕರಣದಲ್ಲಿ ದಾಖಲಾದವರ ಹೆಸರು, ವಿಳಾಸ ಸಹಿತ ಯಾವ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿದೆ: ಸಂಪೂರ್ಣ ಮಾಹಿತಿ ನೀಡುವುದು: | ಬೆಂಗಳೂರು ನಗರದ ನೈಋತ್ಯ ವಿಭಾಗದ ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣಾ ಸರಹದ್ದಿನಲ್ಲಿ ಹಿಂದು ಮತ್ತು ಮುಸ್ಲಿಂ ಸಮುದಾಯದವರ ನಡುವೆ ಪ್ರಗತಿಪುರ 3ನೇ ಕ್ರಾಸ್ ಬಳಿ ದಿನಾಂಕ: 24.03.2024 ರಂದು ರಾತ್ರಿ ಸುಮಾರು 07:30 ಗಂಟೆ ಸಮಯದಲ್ಲಿ ಪ್ರಕರಣದ ಪಿರ್ಯಾದುದಾರರಾದ ಶ್ರೀ ಸುಕುಮಾರ್ ಎಂಬುವವರು ಮನೆಯಲ್ಲಿರುವ ಸಮಯದಲ್ಲಿ ಆರೋಪಿ ಸೈಯದ್ ತಾಹ ಮೆಹದಿ ಎಂಬುವವನು ಪಿರ್ಯಾದುದಾರರ ಮನೆಯ ಗೇಟಿನ ಮುಂದೆ ಆಟೋ ರಿಕ್ಷಾವನ್ನು ನಿಲ್ಲಿಸಿದ್ದು, ಪಿರ್ಯಾದುದಾರರು ಆತನಿಗೆ ನಮ್ಮ ಮನೆಯ ಮುಂದೆ ಯಾಕೆ ಆಟೋ ನಿಲ್ಲಿಸುತ್ತೀಯಾ ತೆಗಿ ಎಂದು ಹೇಳಿದ್ದಕ್ಕೆ 1ನೇ ಆರೋಪಿ ಸೈಯದ್ ತಾಹ ಮಹದಿ ನಾನು ಆಟೋ ತೆಗೆಯೊಲ್ಲ ಎಂದು ಹೇಳಿ ಅಲ್ಲಿಂದ ಓಡಿ ಹೋಗಿ ಸುಮಾರು 10 ರಿಂದ 15 ಜನರನ್ನು ಪಿರ್ಯಾದುದಾರರ ಮನೆಯ ಬಳಿ ಕರೆದುಕೊಂಡು ಬಂದಿದ್ದು, ಅವರಲ್ಲಿ ತಹಾನು ಸೇರಿದಂತೆ ಸುಮಾರು 4 ರಿಂದ 5 ಜನರು ಪಿರ್ಯಾದುದಾರರ ಮನೆಯ ಒಳಗೆ ನುಗ್ಗಿ ಪಿರ್ಯಾದುದಾರರಿಗೆ ಏಕಾಏಕಿ ಹೊಡೆದಿದ್ದು, ನಂತರ ಪಿರ್ಯಾದುದಾರರ ಪತ್ನಿಯಾದ ಭಾರತಿ ಹಾಗೂ ಮಕ್ಕಳಾದ ಪ್ರಾರ್ಥನಾ ಹಾಗೂ ರಚನಾ ರವರುಗಳನ್ನು ಹಿಡಿದು ಎಳೆದಾಡಿ ಹಲ್ಲೆ ಮಾಡಿರುತ್ತಾರೆ. ನಂತರ ಗಲಾಟೆ ಬಿಡಿಸಲು ಬಂದ ಪಿರ್ಯಾದಾರರ ಹಿಂದಿನ ಮನೆಯಲ್ಲಿ ವಾಸಮಾಡಿಕೊಂಡಿರುವ ಕುಮಾರಿ ಹಾಗೂ ಶಶಾಂಕ್ ರವರಿಗೂ ಸಹ ಕೈಗಳಿಂದ ಹಲ್ಲೆ ಮಾಡಿ, ಪಿರ್ಯಾದುದಾರರಿಗೆ ನಿಮ್ಮ ಮನೆಯನ್ನು ಸುಟ್ಟು ಹಾಕುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ. ಆದ್ದರಿಂದ ಪಿರ್ಯಾದುದಾರರ ಮನೆಗೆ ಅಕ್ರಮವಾಗಿ ಪ್ರವೇಶ ಮಾಡಿ ಪಿರ್ಯಾದಿ ಹಾಗೂ ಅವರ ಮನೆಯವರ ಮೇಲೆ ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿರುವ 1) ಸೈಯ್ಯದ್ ತಾಹ ಮೆಹದಿ ಬಿನ್ ಸೈಯ್ಯದ್ ಕರೀ, 23 ವರ್ಷ, 2)ಆಫ್ರಿದ್ ಪಾಷ ಬಿನ್ ಮೌಲ ಖಾನ್, 26 ವರ್ಷ, 3) ಸೈಯ್ಯದ್ ಖರೀ ಬಿನ್ ಸೈಯ್ಯದ್ ಮುಬಾರಕ್ ಮಿಯಾ, 52 ವರ್ಷ, 4) ಅಯಾಜ್ ಪಾಷ ಬಿನ್ ಲೇಟ್ ಅನ್ವರ್ ಪಾಷ, 48 ವರ್ಷ, |

| | | |
|---|---|---|
| | | 5) ನವೀದ್ ಪಾಷ ಬಿನ್ ಜಾವೀದ್ ಅಹಮ್ಮದ್, 23 ವರ್ಷ, 6) ಸೈಯ್ಯದ್ ಅಬ್ರಾರ್ ಮೆಹದಿ ಬಿನ್ ಸೈಯ್ಯದ್ ಕರೀಂ, 28 ವರ್ಷ, 7) ನೂರಿ ಬಾನು ಕೋಂ. ಲೇಟ್ ಜಬಿ ಉಲ್ಲಾ, 41 ವರ್ಷ ರವರುಗಳ ವಿರುದ್ಧ ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಮೊ.ಸಂ.86/2024 ಕಲಂ. 143, 147, 149, 323, 354, 448, 504, 506, ಐ.ಪಿ.ಸಿ ಮತ್ತು 7, 8 ಪೋಕ್ಸೋ ಆಕ್ಟ್ ರೀತ್ಯಾ ಪ್ರಕರಣ ದಾಖಲಾಗಿದ್ದು, ಪ್ರಕರಣದ ಎಲ್ಲಾ ಆರೋಪಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿದ್ದು, ಪ್ರಕರಣವು ಮಾನ್ಯ ಎಫ್.ಟಿ.ಸಿ-1 ನ್ಯಾಯಾಲಯದ Spl C No.1149/2024 ರಲ್ಲಿ ವಿಚಾರಣಾ ಹಂತದಲ್ಲಿದ್ದು, ಮುಂದಿನ ವಿಚಾರಣಾ ದಿನಾಂಕ: 09.03.2026 ಆಗಿರುತ್ತದೆ. |
| ಆ) | ಸದರಿ ಪ್ರದೇಶ ಹಿಂದೂ ಮತ್ತು ಮುಸ್ಲಿಂ ಅಲ್ಲದೇ ಎಲ್ಲಾ ವರ್ಗದ ಜನರು ಅನೇಕ ವರ್ಷಗಳಿಂದ ಸಾಮರಸ್ಯ ಜೀವನ ನಡೆಸುತ್ತಿದ್ದಾರೆ. ಆದರೆ ಕೆಲವು ಸಮಾಜ ಘಾತುಕ ವ್ಯಕ್ತಿಗಳಿಂದ ಇನ್ನು ಸಹ ಇಲ್ಲಿ ವಾಸಿಸುವ ನಾಗರೀಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ: ಕ್ರಮ ಕೈಗೊಂಡಿಲ್ಲವೆಂದರೆ ಯಾವ ಕಾಲಮಿತಿಯೊಳಗೆ ಪರಿಹಾರ ಮಾಡಲಾಗುವುದು: | ಬೆಂಗಳೂರು ನಗರದ ನೈರುತ್ಯ ವಿಭಾಗದ ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣಾ ಸರಹದ್ದಿನ ಪ್ರಗತಿಪುರದಲ್ಲಿ ಹಿಂದು ಮತ್ತು ಮುಸ್ಲಿಂ ಸಮುದಾಯದವರು ಹಲವು ವರ್ಷಗಳಿಂದ ವಾಸಿಸುತ್ತಿದ್ದು ಹಿಂದು ಮತ್ತು ಮುಸ್ಲಿಂ ಜನಾಂಗದವರ ನಡುವೆ ದಿನಾಂಕ:24.03.2024 ರಂದು ಆದ ಪ್ರಕರಣದ ನಂತರ ಪ್ರಗತಿಪುರ ಏರಿಯಾದ ಹಿಂದು ಮತ್ತು ಮುಸ್ಲಿಂ ಜನಾಂಗದವರನ್ನು ಒಟ್ಟು ಗೂಡಿಸಿ ಶಾಂತಿ ಸಭೆಯನ್ನು ನಡೆಸಲಾಗಿರುತ್ತದೆ ಹಾಗೂ ಪ್ರಕರಣದ ಎಲ್ಲಾ ಆರೋಪಿಗಳನ್ನು ಕಾನೂನು ರೀತ್ಯಾ ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಲಾಗಿರುತ್ತದೆ. ಪ್ರಸ್ತುತ ಸದರಿ ಏರಿಯಾದಲ್ಲಿ ಎರಡೂ ಕೋಮಿನವರು ಅನ್ಯೋನ್ಯತೆಯಿಂದ ಜೀವಿಸುತ್ತಿದ್ದು 2024 ರಲ್ಲಿ ನಡೆದ ಘಟನೆಯ ನಂತರ ಯಾವುದೇ ಕೋಮು ಸಂಘರ್ಷದಂತಹ ಪ್ರಕರಣಗಳು ವರದಿಯಾಗಿರುವುದಿಲ್ಲ. |
| ಇ) | ಪ್ರಗತಿಪುರ 3ನೇ ಅಡ್ಡ ರಸ್ತೆಯಲ್ಲಿ ಕೆಲವು ಬಡ ಕುಟುಂಬದವರು ಚಿಲ್ಲರೆ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದು ಕೆಲವು ಸಮಾಜ ಘಾತುಕ ಯುವಕರು ಬೇರೆ ನಗರ ಪ್ರದೇಶಗಳಿಂದ ಬಂದು ಇಲ್ಲಿ ಖಾಲಿ ಇರುವ ಜಾಗದಲ್ಲಿ ಗಾಂಜಾ ಸೇದುವುದು ಮತ್ತು ಮಧ್ಯಪಾನ ಮಾಡಿ ರಾತ್ರಿ ಎಲ್ಲಾ ಜನರಿಗೆ ತೊಂದರೆ | ಬೆಂಗಳೂರು ನಗರದ ನೈಋತ್ಯ ವಿಭಾಗದ ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣಾ ಸರಹದ್ದಿನ ಪ್ರಗತಿಪುರ ಏರಿಯಾದಲ್ಲಿ ಹಿಂದು ಮತ್ತು ಮುಸ್ಲಿಂ ಜನಾಂಗದವರು ವಾಸಿಸುತ್ತಿದ್ದು ಸದರಿ ಏರಿಯಾದಲ್ಲಿ ಹೆಚ್ಚಾಗಿ ದಿನ ನಿತ್ಯದ ಕೂಲಿ ಕೆಲಸ, ವ್ಯಾಪಾರ, ಮನೆ ಕೆಲಸ ಮಾಡುವವರು ಹೆಚ್ಚಾಗಿ ವಾಸಿಸುತ್ತಿರುತ್ತಾರೆ. ಸದರಿ ಏರಿಯಾದಲ್ಲಿ ಗಾಂಜಾ ಸೇವನೆ ಮಾಡುವವರ ಬಗ್ಗೆ ಜನಸಂಪರ್ಕ ಸಭೆಗಳಲ್ಲಿ ಸಾರ್ವಜನಿಕರು ಮಾಹಿತಿ ನೀಡಿದ ಮೇರೆಗೆ ಸದರಿ ಏರಿಯಾದಲ್ಲಿ ವಿಶೇಷ ಗಸ್ತು ವ್ಯವಸ್ಥೆಯನ್ನು ಕೈಗೊಂಡಿರುತ್ತದೆ ಹಾಗೂ ಸದರಿ ಏರಿಯಾದಲ್ಲಿ |

| | | |
|---|---|---|
| | ನೀಡುತ್ತಿರುವುದಲ್ಲದೆ ಜನರಿಗೆ ಜೀವ ಬೆದರಿಕೆ ಹಾಕುವುದಲ್ಲದೆ. ಮತ್ತು ಅಲ್ಲಿ ನಿಂತಿರುವ ವಾಹನಗಳನ್ನು ಜಕಂ ಮಾಡುವುದು ಮನೆಗಳ ಕಿಟಕಿ ಗಾಜನ್ನು ಒಡೆದು ಹಾಕುವುದನ್ನು ಮಾಡುತ್ತಿದ್ದು ಹಲವಾರು ಬಾರಿ ದೂರು ನೀಡಿದರು ಸಹ ಪೊಲೀಸ್ ಇಲಾಖೆ ಯಾವ ಕ್ರಮ ಕೈಗೊಳ್ಳುತ್ತಿಲ್ಲ, ಇದಕ್ಕೆ ಸರ್ಕಾರ ಸೂಕ್ತ ಕ್ರಮವನ್ನು ಯಾವ ಕಾಲಮಿತಿಯೊಳಗೆ ಮಾಡಲಾಗುವುದು: ಮಾದಕ ವಸ್ತುಗಳನ್ನು ಸೇವಿಸಿ ದಾಖಲಾದ ಪ್ರಕರಣಗಳ 2 ವರ್ಷದ ಮಾಹಿತಿ ಜೊತೆಗೆ ವಿಳಾಸ ಹೆಸರು, ದೂರುಗಳನ್ನು ನೀಡಿರುವ ಪ್ರತಿಗಳನ್ನು ನೀಡುವುದು; ಯಾವ ಕಾಯ್ದೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು). | ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಿಬ್ಬಂದಿಗಳೊಂದಿಗೆ ಏರಿಯಾ ಡಾಮಿನೇಷನ್ ಮತ್ತು ಫೂಟ್ ಪೆಟ್ರೋಲಿಂಗ್ ಅನ್ನು ಮಾಡಲಾಗುತ್ತಿದೆ. ಸದರಿ ಏರಿಯಾದಲ್ಲಿ ನಿಂತಿರುವ ವಾಹನಗಳನ್ನು ಜಖಂ ಮಾಡುವುದು ಮನೆಗಳ ಕಿಟಕಿ ಗಾಜನ್ನು ಒಡೆದು ಹಾಕಿರುವಂತಹ ಯಾವುದೇ ಪ್ರಕರಣಗಳು ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ವರದಿಯಾಗಿರುವುದಿಲ್ಲ.<br><br>ಪ್ರಗತಿಪುರ ಏರಿಯಾದಲ್ಲಿ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಹಾಗೂ ಮಾದಕ ವಸ್ತುಗಳ ಸೇವನೆಯ ಬಗ್ಗೆ ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಅರಿವು ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.<br><br>➢ ಸ್ಥಳೀಯರೊಂದಿಗೆ ಸೇರಿಕೊಂಡು ಒಟ್ಟು 04 ನಶೆ ಮುಕ್ತ ಜಾಗೃತಿ ಅಭಿಯಾನಗಳನ್ನು ಮಾಡಲಾಗಿರುತ್ತದೆ.<br>➢ ಸಿಬ್ಬಂದಿಗಳೊಂದಿಗೆ ಫೂಟ್ ಪೆಟ್ರೋಲಿಂಗ್ ಮತ್ತು ಏರಿಯಾ ಡಾಮಿನೇಷನ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳ ಲಾಗಿರುತ್ತದೆ.<br><br>ಪ್ರಗತಿಪುರ, ಸರಬಂಡೆ ಪಾಳ್ಯ, ಹರಿಕಾಲೋನಿ ಕಡೆಗಳಲ್ಲಿ ಗಾಂಜಾ ಸೇವನೆ, ಮಧ್ಯಪಾನ ಹಾಗೂ ಧೂಮಪಾನ ಮಾಡುವವರ ವಿರುದ್ಧ (ಕೋಪ್ಟಾ ಪ್ರಕರಣಗಳು) ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡಂತೆ ಪ್ರಕರಣಗಳನ್ನು ದಾಖಲು ಮಾಡಲಾಗಿರುತ್ತದೆ. |

| ವರ್ಷ | ದಾಖಲಾಗಿರುವ ಗಾಂಜಾ ಸೇವನೆ/ ಮಾರಾಟದ ಪ್ರಕರಣಗಳು | ದಾಖಲಿಸಿದ ಲಘು ಪ್ರಕರಣಗಳು | ದಾಖಲಿಸಿದ ಕೋಪ್ಟಾ ಪ್ರಕರಣಗಳು |
|---|---|---|---|
| 2024 | 0 | 164 | 80 |
| 2025 | 01 | 120 | 165 |
| 2026 | 06 | 20 | 45 |

ಕಡತ ಸಂಖ್ಯೆ: ಹೆಚ್ ಡಿ 115 ಪಿಸಿಇ 2026

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು